MOTION FOR APPOINTMENT OF A SELECT COMMITTEE

Ref. The utilisation of water resources of the State.

ಶ್ರೀ ಎಸ್.ಆರ್. ಬೊಮ್ಮಾಯಿ.—ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ನೀರಾವರಿ ವಿಚಾರದಲ್ಲಿ ಸದನದ ಒಂದು ಸಮಿತಿಯನ್ನು ನೇಮಕ ಮಾಡತಕ್ಕಂಥ ಮಾತನ್ನು ಕೊಟ್ಟಿದ್ದರು. ಅದನ್ನು ಈಗ ರೂಲ್ ೧೫೮ ಕೆಳಗೆ ಮೂವ್ ಮಾಡುತ್ತಿದ್ದೇನೆ. ''ರಾಜ್ಯದ ಜಲಸಂಪತ್ತನ್ನು ಪೂರ್ತಿಯಾಗಿ ನಿಗದಿತ ಸಮಯದಲ್ಲಿ ಬಳಸಿಕೊಳ್ಳಲಿಕ್ಕೆ ಸರ್ಕಾರಕ್ಕೆ ಸಲಹೆ ನೀಡಲು ಈ ಕೆಳಕಂಡ ಸದಸ್ಯರನ್ನೊಳಗೊಂಡ ರಾಜ್ಯದ ನೀರಾವರಿ ಸಮಸ್ಯೆಗಳ ಪರಿಹಾರ ಸೂಚಕ ಸದನದ ಸಮಿತಿಯನ್ನು ನಿಯಮ ೧೫೮ರ ಮೇರೆಗೆ ರಚಿಸಲಿಕ್ಕೆ ಈ ಸಭೆಯು ಅನುಮತಿಯನ್ನು ಕೋರುತ್ತೇನೆ.

(೧)	ಶ್ರೀ ಎಸ್.ಆರ್. ಬೊಮ್ಮಾಯಿ,	—ನೀರಾವರಿ ಸಚಿವರು, ಅಧ್ಯಕ್ಷರು.
(೨)	ಶ್ರೀ ಹೆಚ್.ಡಿ. ದೇವೇಗೌಡ	ಸದಸ್ಯರು
(೩)	ಶ್ರೀ ಎಸ್.ಎಸ್. ಕೆಡಪಟ್ಟಿ	—,,—
(೪)	ಶ್ರೀ ಎಂ.ಎಲ್. ಮುತ್ತಣ್ಣನವರ್	—,,—
(೫)	ಶ್ರೀ ಜೆ.ಎಸ್. ದೊಡ್ಡಮೇಟಿ.	—,,—
(೬)	ಶ್ರೀ ಹೆಚ್.ಸಿ. ಮಹದೇವಪ್ಪ.	—,,—
(೭)	ಶ್ರೀ ಬಸವರಾಜ ಪಾಟೀಲ್ ಅಟ್ಟೂರ್.	—,,—
(೮)	ಶ್ರೀ ಕೃಷ್ಣ.	—,,—
(೯)	ಶ್ರೀ ಎಂ.ಎಸ್. ಪಾಟೀಲ್.	—,,—
(೧೦)	ಶ್ರೀ ಪಿ.ಎನ್. ಭಾಸ್ಕರಪ್ಪ.	—,,—
(೧೧)	ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.	—,,—
(೧೨)	ಶ್ರೀ ಕೆ.ಹೆಚ್. ಪಾಟೀಲ್.	—,,—
(೧೩)	ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.	—,,—
(೧೪)	ಶ್ರೀ ಎಂ.ಎಸ್. ಕೃಷ್ಣನ್.	—,,—
(೧೫)	ಶ್ರೀ ಆರ್. ವೆಂಕಟರಾಮಯ್ಯ.	—,,—
(೧೬)	ಶ್ರೀ ಬಿ.ಎಸ್. ಯಡಿಯೂರಪ್ಪ.	—,,—
(೧೭)	ಶ್ರೀ ಕೆ.ಬಿ. ಕೋಳಿವಾಡ್.	—,,—

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ ''ರಾಜ್ಯದ ಜಲಸಂಪತ್ತನ್ನೂ ಪೂರ್ತಿಯಾಗಿ ನಿಗದಿತ ಸಮಯದಲ್ಲಿ ಬಳಸಿಕೊಳ್ಳಲಿಕ್ಕೆ ಸರ್ಕಾರಕ್ಕೆ ಸಲಹೆ ನೀಡಲು ಮೇಲ್ಕಂಡ ಸದಸ್ಯರುಗಳನ್ನೊಳಗೊಂಡ ರಾಜ್ಯದ ನೀರಾವರಿ ಸಮಸ್ಯೆಗಳ ಪರಿಹಾರ ಸೂಚಕ ಸದನದ ಸಮಿತಿಯನ್ನು ನಿಯಮ ೧೫೮ರ ಮೇರೆಗೆ ಮೇಲೆ ಕಾಣಿಸಿದಂತೆ ೧೭ ಜನರ ಸಮಿತಿ ರಚನೆಗೆ ಸಭೆಯು ಅನುಮತಿಯನ್ನು ನೀಡುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಸಮಿತಿ ರಚನೆಗೆ ಅನುಮತಿಯನ್ನು ನೀಡಲಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಬೊಮ್ಮಾಯಿಯವರು ಬಹಳ ಸಮಯದಿಂದ ದೇವೇಗೌಡರು ಮತ್ತು ಭಿನ್ನಮತೀಯರೊಂದಿಗೆ ಮತ್ತು ಲಾಯಲಿಸ್ಟ್ ಇವರ ಜೊತೆಯಲ್ಲಿ ಒಂದು ದೊಡ್ಡ ಫಾರ್ಮುಲಾ ಮಾಡುತ್ತೇವೆ ಎಂದು ರಾಜಿ ಮಾಡುತ್ತೇವೆ ಎಂದು ಹೇಳಿದರು. ರಾಜಿ ಸೂತ್ರ ಇದೇ ಇರಬೇಕು. ಇದರಿಂದ ದೇವೇಗೌಡ ಅವರ ಪಂಗಡದವರಿಗೆ ಬಹಳ ತೃಪ್ತಿಯಾಗಿರಬೇಕು.

ಅಧ್ಯಕ್ಷರು.—ಇದರಲ್ಲಿ ನಿಮ್ಮವರೂ ಇದ್ದಾರೆ. You must compliment the Government...ಈಗ ನಿಯಮ ೨೩೪. ಶ್ರೀ ಪಸಂತ ವಿ. ಸಾಲಿಯಾನ—ಗೈರುಹಾಜರಿ—ನೆಕ್ಸ್ಟ ಶ್ರೀ ಗೋಪಾಲ ಮುಕುಂದ ಕಾನಡೆ—ಗೈರುಹಾಜರಿ—ನೆಕ್ಸ್ಟ ಶ್ರೀ ಕುಲಕರ್ಣಿ—ಗೈರುಹಾಜರಿ—ನೆಕ್ಸ್ಟ ಶ್ರೀ ಬಿ.ಹೆಚ್. ಯಂಕನಾಯಕ್ ಮತ್ತು ಶ್ರೀ ಆರ್. ವೆಂಕಟರಾಮಯ್ಯನವರು.